# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ ೬ ಆರಾಆ ೨೦೦೧

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: ೧೪.೩.೨೦೦೧

## ಸುತ್ತೋಲೆ

ವಿಷಯ: ಸರ್ಕಾರದ ಯಾವುದೇ ಸಮಾರಂಭಗಳಲ್ಲಿ ಹಾರ, ತುರಾಯಿ(garlands) ಹಾಗೂ ಉಡುಗೊರೆ/ನೆನಪಿನ ಕಾಣಿಕೆಗಳನ್ನು(momentos)ನೀಡುವುದನ್ನು ನಿಷೇಧಿಸುವ ಬಗ್ಗೆ.

ಉಲ್ಲೇಖ: ದಿನಾಂಕ: ೯.೨.೨೦೦೧ರ ಸಮ ಸಂಖ್ಯೆಯ ಸುತ್ತೋಲೆ.

ಂಂಂಂ

ಉಲ್ಲೇಖದಲ್ಲಿನ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ: ೯.೨.೨೦೦೧ರನ್ನು ಈ ಕೆಳಕಂಡಂತೆ ಮಾರ್ಪಡಿಸಲಾಗಿದೆ.

ಗುಜರಾತ್ ರಾಜ್ಯದಲ್ಲಿ ಸಂಭವಿಸಿದ ಭೀಕರ ಭೂಕಂಪವನ್ನು ರಾಷ್ಟ್ರೀಯ ದುರಂತವೆಂದು ಪರಿಗಣಿಸಿರುವ ಹಿನ್ನೆಲೆಯಲ್ಲಿ ೨೦೦೧-೨೦೦೨ರ ಆರ್ಥಿಕ ವರ್ಷ ಅಂತ್ಯಗೊಳ್ಳುವವರೆಗೆ ಸರ್ಕಾರದ ಯಾವುದೇ ಸಮಾರಂಭಗಳಲ್ಲಿ ಹಾರ, ತುರಾಯಿ(garlands) ಹಾಗೂ ಉಡುಗೊರೆ/ನೆನಪಿನ ಕಾಣಿಕೆಗಳನ್ನು (momentos) ನೀಡುವುದನ್ನು ನಿಷೇಧಿಸಬೇಕೆಂದು ಸರ್ಕಾರ ನಿರ್ಧರಿಸಿದೆ.

ಆದಕಾರಣ, ಇನ್ನು ಮುಂದೆ ರಾಜ್ಯ ಸರ್ಕಾರವು ಏರ್ಪಡಿಸುವ ಸಮಾರಂಭಗಳಲ್ಲಿ ಹಾರ, ಹಾಗೂ ತುರಾಯಿ (garlands) ಉಡುಗೊರೆ/ನೆನಪಿನ ಕಾಣಿಕೆಗಳನ್ನು(momentos) ಅಂತಹ ಸಮಾರಂಭಗಳಲ್ಲಿ ಭಾಗವಹಿಸುವ ಸಚಿವರುಗಳಿಗೆ/ಗಣ್ಯರಿಗೆ ಅಧಿಕಾರಿಗಳಿಗೆ ನೀಡುವುದನ್ನು ನಿಷೇಧಿಸಲಾಗಿದೆ. ಈ ಸೂಚನೆಯನ್ನು ಸರ್ಕಾರಿ ಅಧಿಕಾರಿಗಳು, ಸಂಘ ಸಂಸ್ಥೆಗಳು ಮತ್ತು ಸಾರ್ವಜನಿಕರು ಪಾಲಿಸಲು ಕೋರಲಾಗಿದೆ.

(ಜಿ. ರಾಜು ಪ್ರೇಂ ಕುಮಾರ್)
ಸರ್ಕಾರದ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಇವರಿಗೆ:

೧) ಎಲ್ಲಾ ಸಚಿವರುಗಳು: ರಾಜ್ಯ ಸಚಿವರುಗಳು
೨) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು:ಅಪರ ಮುಖ್ಯಕಾರ್ಯದರ್ಶಿಗಳು:ಪ್ರಧಾನ ಕಾರ್ಯದರ್ಶಿಗಳು: ಕಾರ್ಯದರ್ಶಿಗಳು.
೩) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರು
೪) ವಿಭಾಗಾಧಿಕಾರಿಗಳು/ಎಲ್ಲಾ ಜಿಲ್ಲಾಧಿಕಾರಿಗಳು:ಎಲ್ಲಾ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ಗಳು ಇಲಾಖಾ ಮುಖ್ಯಸ್ಥರು:ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು
೫) ನಿರ್ದೇಶಕರು, ವಾರ್ತಾ ಇಲಾಖೆ.
೬) ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿ

ನಂ: ನಾಆಂಇಲಾಂಗ: 874: 2000-2001

ಜಿಲ್ಲಾಧಿಕಾರಿಯವರ ಕಾರ್ಯಾಲಯ,
ಹಾಸನ ಜಿಲ್ಲೆ – ಹಾಸನ
ದಿನಾಂಕ: 23-3-2001.

1) ಆ ಉಪ ವಿಭಾಗಾಧಿಕಾರಿಗಳು ಹಾಸನ :
ಸಕಲೇಶಪುರ.

2) ಜಿಲ್ಲೆಯ ಎಲ್ಲಾ ತಹಶೀಲ್ದಾರರವರಿಗೆ.

3) ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು,
ಹಾಸನ.

ಮಾನ್ಯರೆ,

ವಿಷಯ:– ಸರ್ಕಾರದ ಯಾವುದೇ ಸಮಾರಂಭಗಳಲ್ಲಿ ಹಾರ ತುರಾಯಿ, ಉಡುಗೊರೆ ಹಾಗೂ ನೆನಪಿನ ಕಾಣಿಕೆಗಳನ್ನು ನೀಡುವುದನ್ನು ನಿಷೇಧಿಸುವ ಕುರಿತು.

ಉಲ್ಲೇಖ:– ಸರ್ಕಾರದ ಸಿಆಸುಇ: ಇಲಾಖೆಯ ಪತ್ರ:ಸಿಆಸುಇ: 6: ರಾರಾಅ : 2001 ದಿನಾಂಕ: 14-3-2001.

– – –

ಗುಜರಾತ್ ರಾಜ್ಯದಲ್ಲಿ ಸಂಭವಿಸಿದ ಭೀಕರ ಭೂಕಂಪನವನ್ನು ರಾಷ್ಟ್ರೀಯ ದುರಂತವೆಂದು ಪರಿಗಣಿಸಿರುವ ಹಿನ್ನೆಲೆಯಲ್ಲಿ 2001-2002ನೇ ಆರ್ಥಿಕ ವರ್ಷದಲ್ಲಿ ಸರ್ಕಾರದ ಯಾವುದೇ ಸಮಾರಂಭಗಳಲ್ಲಿ ಹಾರ, ತುರಾಯಿ, ಉಡುಗೊರೆ, ನೆನಪಿನಕಾಣಿಕೆಗಳನ್ನು ನೀಡುವುದನ್ನು ನಿಷೇಧಿಸಬೇಕೆಂದು ಸರ್ಕಾರವು ನಿರ್ಧರಿಸಿದೆ. ರಾಜ್ಯ ಸರ್ಕಾರವು ಏರ್ಪಡಿಸುವ ಸಮಾರಂಭಗಳಲ್ಲಿ ಹಾರ, ತುರಾಯಿ, ಉಡುಗೊರೆ, ನೆನಪಿನಕಾಣಿಕೆಗಳನ್ನು ಅಂತಹ ಸಮಾರಂಭಗಳಲ್ಲಿ ಭಾಗವಹಿಸುವ ಸಚಿವರುಗಳಿಗೆ : ಅಧಿಕಾರಿಗಳಿಗೆ ನೀಡುವುದನ್ನು ನಿಷೇಧಿಸಲಾಗಿರುತ್ತದೆ. ಈ ನಿಯಮವನ್ನು ತಪ್ಪದೇ ಪಾಲಿಸಲು ಕೋರಲಾಗಿದೆ. ಅಲ್ಲದೆ ಈ ವಿಷಯವನ್ನು ಪತ್ರಿಕೆಗಳಲ್ಲಿ ಹಾಗೂ ಪತ್ರಕರ್ತರಿಗೆ ತಿಳಿಸಲು ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳಿಗೆ ಕ್ರಮ ಜರುಗಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

ಜಿಲ್ಲಾಧಿಕಾರಿಯವರ ಪರವಾಗಿ,
ಹಾಸನ.

27/3